# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 345

ಸದಸ್ಯರ ಹೆಸರು : ಡಾ॥ ಚಂದ್ರಶೇಖರ್ ಬಿ. ಪಾಟೀಲ್

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 11-12-2020

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಇಲಾಖೆಯಿಂದ ಕಳೆದ ಒಂದು ವರ್ಷದಲ್ಲಿ ಎಷ್ಟು ಹಣ ಟೋಲ್ ಫೀಸ್ ಸಂಗ್ರವಾಗಿದೆ; | ನಾಲ್ಕೂ ಸಾರಿಗೆ ನಿಗಮಗಳಿಂದ ಕಳೆದ ಒಂದು ವರ್ಷದಲ್ಲಿ ಪ್ರಯಾಣಿಕರಿಂದ ಸಂಗ್ರಹಿಸಲಾದ ಟೋಲ್ ಫೀಸ್ ಹಣದ ವಿವರ:<br><br>ಸಂಸ್ಥೆಗಳು — ಸಂಗ್ರಹವಾದ ಮೊತ್ತ (ರೂ. ಕೋಟಿಗಳಲ್ಲಿ)<br>ಕ.ರಾ.ರ.ಸಾ.ನಿಗಮ — 107.79<br>ಬೆಂ.ಮ.ಸಾ.ಸಂಸ್ಥೆ — 1.38<br>ವಾ.ಕ.ರ.ಸಾ.ಸಂಸ್ಥೆ — 35.13<br>ಈ.ಕ.ರ.ಸಾ.ಸಂಸ್ಥೆ — 28.85 |
| ಆ. | ಸಾರಿಗೆ ಇಲಾಖೆಯಲ್ಲಿ ನಾಲ್ಕು ನಿಗಮಗಳು ನಷ್ಟದಲ್ಲಿ ನಡೆಯುತ್ತಿರುವುದು ನಿಜವೇ; ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿವರ ನೀಡುವುದು; | ಸರ್ಕಾರದ ಗಮನಕ್ಕೆ ಬಂದಿದೆ.<br><br>ನಾಲ್ಕೂ ಸಾರಿಗೆ ಸಂಸ್ಥೆಗಳು 2019-20ನೇ ಸಾಲಿನಲ್ಲಿ ಅನುಭವಿಸಿರುವ ನಷ್ಟದ ಮಾಹಿತಿ ಈ ಕೆಳಗಿನಂತಿದೆ:<br><br>ಸಂಸ್ಥೆಗಳು — ನಷ್ಟ (ರೂ.ಕೋಟಿಗಳಲ್ಲಿ)<br>ಕ.ರಾ.ರ.ಸಾ.ನಿಗಮ — 156.56<br>ಬೆಂ.ಮ.ಸಾ.ಸಂಸ್ಥೆ — 549.34<br>ವಾ.ಕ.ರ.ಸಾ.ಸಂಸ್ಥೆ — 186.46<br>ಈ.ಕ.ರ.ಸಾ.ಸಂಸ್ಥೆ — 89.27 |
| ಇ. | ಇಲಾಖೆಯಲ್ಲಿ ಅಂತರ ನಿಗಮ ವರ್ಗಾವಣೆಗೆ ಅವಕಾಶ ಕಲ್ಪಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; | ರಾಜ್ಯಮಟ್ಟದ ಹುದ್ದೆಗಳಾದ 'ಅಧಿಕಾರಿಗಳು' ಹಾಗೂ ದರ್ಜೆ-3 'ಮೇಲ್ವಿಚಾರಕ' ಸಿಬ್ಬಂದಿಗಳ ವೃಂದ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ನಿರ್ವಹಿಸಲಾಗುತ್ತಿರುವುದರಿಂದ ಅಧಿಕಾರಿ ಹಾಗೂ ದರ್ಜೆ-3 ಮೇಲ್ವಿಚಾರಕ ಸಿಬ್ಬಂದಿಗಳನ್ನು ಒಂದು ನಿಗಮದಿಂದ ಇನ್ನೊಂದು ನಿಗಮಕ್ಕೆ ನಿಯೋಜನೆ ಮೂಲಕ ವರ್ಗಾವಣೆ ಮಾಡಲು ಅವಕಾಶವಿರುತ್ತದೆ.<br><br>ಆದರೆ, ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4ರ ಸಿಬ್ಬಂದಿಗಳು ವಿಭಾಗ ಮಟ್ಟದ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳ ವೃಂದ ನಿರ್ವಹಣೆ ಆಯಾ ಸಂಸ್ಥೆಯದ್ದಾಗಿರುತ್ತದೆ. ಆದ್ದರಿಂದ, ಸದರಿ ಸಿಬ್ಬಂದಿಗಳನ್ನು ಒಂದು ನಿಗಮದಿಂದ ಇನ್ನೊಂದು ನಿಗಮಕ್ಕೆ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ:ಸಾರಿಇ 45 ಸಾಸಂಸೇ 2016, ದಿನಾಂಕ:08.06.2017 ರನ್ವಯ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ರಅಂತರ ನಿಗಮ ವರ್ಗಾವಣೆಯನ್ನು ಒಂದು ಬಾರಿ ಪರಿಹಾರವಾಗಿ ಮಾತ್ರ ಮಾಡಲಾಗಿರುತ್ತದೆ. |

...2

ಈ

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 371ಜೆ ಜಾರಿಯಾದ ಮೇಲೆ ಆ ಭಾಗದಲ್ಲಿ ಎಷ್ಟು ಹುದ್ದೆಗಳನ್ನು ಸಾರಿಗೆ ಇಲಾಖೆಯಲ್ಲಿ ಭರ್ತಿ ಮಾಡಲಾಗಿದೆ; ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಹುದ್ದೆಗಳಿಗೆ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕರಾರಸಾಸಂಸ್ಥೆ ಮಟ್ಟದಲ್ಲಿ 371 ಜೆ ಮೀಸಲಾತಿ ಒಳಪಟ್ಟ ಈಕರಸಾಸಂಸ್ಥೆ, ಬೆಮಸಾಸಂಸ್ಥೆ ಹಾಗೂ ಕರಾರಸಾ ನಿಗಮದ ಕೇಂದ್ರ ಕಛೇರಿಗೆ ಸಂಬಂಧಿಸಿದ ರಾಜ್ಯಮಟ್ಟದ ಹುದ್ದೆಗಳಾದ ದರ್ಜೆ–1 ಕಿರಿಯ, ದರ್ಜೆ–2 ಹಾಗೂ ದರ್ಜೆ–3 ಮೇಲ್ವಿಚಾರಕ ವೃಂದಗಳ ಹುದ್ದೆಗಳಲ್ಲಿ ಭರ್ತಿ ಮಾಡಿರುವ ಮತ್ತು ಖಾಲಿ ಇರುವ ಹುದ್ದೆಗಳ ಮಾಹಿತಿ ಕೆಳಕಂಡಂತಿದೆ:

| ಸಂಸ್ಥೆಗಳು | ವಿವರ | ಭರ್ತಿಗೊಳಿಸಿದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|
| ಕ.ರಾ.ರ.ಸಾ.ನಿಗಮ | ನೇರ ನೇಮಕಾತಿ | 81 | 124 |
| | ಮುಂಬಡ್ತಿ | 228 | 306 |
| ಬೆಂ.ಮ.ಸಾ.ಸಂಸ್ಥೆ | ನೇರ ನೇಮಕಾತಿ | 2606 | 27 |
| | ಮುಂಬಡ್ತಿ | 202 | 75 |
| ವಾ.ಕ.ರ.ಸಾ.ಸಂಸ್ಥೆ | 371ಜೆ ಅನ್ವಯಿಸುವುದಿಲ್ಲ. | | |
| ಈ.ಕ.ರ.ಸಾ.ಸಂಸ್ಥೆ | ನೇರ ನೇಮಕಾತಿ | 3353 | 1082 |
| | ಮುಂಬಡ್ತಿ | 1256 | 267 |

ಸಾರಿಗೆ ಆಯುಕ್ತರ ಕಛೇರಿಗೆ ಸಂಬಂಧಿಸಿದ ಗ್ರೂಪ್–ಎ, ಬಿ, ಸಿ ಮತ್ತು ಡಿ ವೃಂದಗಳ ಮಾಹಿತಿಯು ಕೆಳಕಂಡಂತಿದೆ:

| ಇಲಾಖೆ | ಭರ್ತಿ ಮಾಡಲಾದ ಹುದ್ದೆಗಳ ವಿವರ | | ಖಾಲಿ ಇರುವ ಹುದ್ದೆಗಳ ವಿವರ | |
|---|---|---|---|---|
| | ನೇರ ನೇಮಕಾತಿ | ಬಡ್ತಿ | ನೇರ ನೇಮಕಾತಿ | ಬಡ್ತಿ |
| ಸಾರಿಗೆ ಆಯುಕ್ತರ ಕಛೇರಿ | 89 | 57 | 105 | 44 |

ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅರ್ಹ ಅಭ್ಯರ್ಥಿಗಳ ಅಲಭ್ಯತೆ ಹಾಗೂ ಕೋವಿಡ್–19 ಕಾರಣದಿಂದಾಗಿ ಭರ್ತಿ ಮಾಡುವಲ್ಲಿ ವಿಳಂಬವಾಗಿರುತ್ತದೆ

ಕೋವಿಡ್–19ರ ಹಿನ್ನೆಲೆಯಲ್ಲಿ ಆರ್ಥಿಕ ಮಿತವ್ಯ ಸಾಧಿಸಲು ಸರ್ಕಾರದ ಸುತ್ತೋಲೆ ಕ್ರಮ ಸಂ.ಆಇ 03 ಬಿಇಎಂ 2020 ದಿನಾಂಕ: 06.07.2020ರನ್ವಯ ಕಲ್ಯಾಣ–ಕರ್ನಾಟಕ ವ್ಯಾಪ್ತಿಯ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೇರಿ ಎಲ್ಲಾ ನೇರ ನೇಮಕಾತಿ ಹುದ್ದೆಗಳ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ.

ಸದರಿ ನಿರ್ಬಂಧವನ್ನು ತೆರವುಗೊಳಿಸಿದ ನಂತರದಲ್ಲಿ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿಗೊಳಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ: ಟಿಡಿ 256 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು